೨೦-೧೦-೧
7-P-2

Reg no Kk ೪೫ 12 - For Influential Publicity - 4-10-76

ಕೃಷ್ಣ ಮಹೋತ್ಸವ ನರಮೇಧ ವಜ್ರಮಹೋತ್ಸವ ನೇರವೇರಿತಲಿರುವ

ಸತ್ಯವಾದಿ
SATYAVADI

60th Diamond Jubilee Year
೬೦ನೇ ವಜ್ರಮಹೋತ್ಸವ ವರ್ಷ
★ Satyavadi Daily . Mysore 4 ★

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [5 ಪೈಸೆ

ನಷ್ಟ ಪರಿಹಾರ

ಬೆಂಗಳೂರು— ತೋಳಗಳ ಹಾವಳಿಯಿಂದ ಕೊಲ್ಲಾಪುರ ಮನೆ ಪ್ರಾಣಿಗಳ ಬಗ್ಗೆ ಪರಿಹಾರ ನೀಡಲು ರಾಜ್ಯ ವನ್ಯಜೀವಿ ಸಲಹಾ ಸಮಿತಿ ಶಿಫಾರಸ್ಸು ಮಾಡಿದೆ.

●

ಸುಂಟರಗಾಳಿ ಹಾವಳಿ

ಮೆಕ್ಸಿಕೊ— ಇಲ್ಲಿಯ ಲಾ ಪಾಸ್ ನಗರದಲ್ಲಿ ಮೊನ್ನೆ ಬೀಸಿದ ಭೀಕರ ಸುಂಟರ ಗಾಳಿಯಿಂದ 500 ಮಂದಿ ಪಕ್ಕು 600 ಮಂದಿ ನಾಪತ್ತೆಯಾಗಿದ್ದಾರೆ.

★

ಹಂದಿ ಹಾಕಿದ ಅನೆ ಮರಿ

ವೀರಾಜಪೇಟೆಯ ಕರಡ ಗ್ರಾಮದ ಓರ್ವರ ಮನೆಯಲ್ಲಿ ಹಂದಿಯು ಅನೆ ಮರಿಯಂತಿರುವ ಮರಿಗೆ ಜನ್ಮನಿತ್ತಿತೆಂದು ವರದಿಯಾಗಿದೆ — ಇದಕ್ಕೆ ಅನೆ ಮರಿ ಅಕೃತಿಯ ಸೊಂಡಲು, ಕಿವಿ, ದೊಡ್ಡ ಬಾಯಿ, ಕಣ್ಣುಗಳು ಇದ್ದು, ಹುಟ್ಟಿದ ಕೂಡಲೇ ಸತ್ತು ಹೋಯಿತು.

★

ಬಾಕ್ಸಿಂಗ್ ನಿಂದ ರಿಟೈರ್

ಇಸ್ತಂಬಾಲ್— ವಿಶ್ವವಿಖ್ಯಾತ ಬಾಕ್ಸಿಂಗ್ ವೀರ ಮಹಮದ್ ಅಲಿಯು ಬಾಕ್ಸಿಂಗ್‌ನಿಂದ ರಿಟೈರ್ ಆಗಿ, ಇಸ್ಲಾಂ ಕಾರ್ಯದಲ್ಲಿ ಎಂಗ್ನರಾಗುವುದಾಗಿ ಪ್ರಕಟಿಸಿರುವರು

★

ಓರಿಯಂಟ್ ಎಕ್ಸ್‌ಪ್ರೆಸ್ ನಿಲ್ಲುತ್ತದೆ

ಪ್ಯಾರಿಸ್‌ನಿಂದ ಇಸ್ತಂಬಾಲ್‌ಗೆ ಮಧ್ಯೆ ಓಡಾಡುತ್ತಿರುವ " ಓರಿಯೆಂಟ್ ಎಕ್ಸ್‌ಪ್ರೆಸ್ " ರೈಲನ್ನು ವಜಾಮಾಡಲು 26 ಐರೋಪ್ಯ ರೈಲ್ವೆ ಕಂಪೆನಿಗಳ ಸಮ್ಮೇಳನದಲ್ಲಿ ನಿರ್ಧರಿಸಲಾಯಿತು

○

ಪುಕ್ಕಟ್ಟೆ ಕ್ಷೌರ

ಗುಜರಾತಿನ ಒಂದು ಗ್ರಾಮದ ಒಬ್ಬ ಕ್ಷೌರಿಕನು ಸಂತತಿನಿರೋಧ ಚಿಕಿತ್ಸೆ ಮಾಡಿಸಿಕೊಳ್ಳುವ ಆ ಗ್ರಾಮಸ್ಥರಿಗೆ 1 ವರ್ಷ ಕಾಲ ಪುಕ್ಕಟ್ಟೆ ಕ್ಷೌರ ಮಾಡುವುದಾಗಿ ತಿಳಿಸಿದ್ದಾನೆ

★

ಕೇಂದ್ರದ ನೆರವು

ಮೈಸೂರು— ಈಚ್ಚಿನ ಅನಾವೃಷ್ಟಿ ಪೀಡಿತ 14 ಜಿಲ್ಲೆಗಳಲ್ಲಿ ಪರಿಹಾರಕ್ಕೆ ಕರ್ನಾಟಕವು ಕೇಂದ್ರದಿಂದ ರೂ 21 ಕೋಟಿ ಸಹಾಯವನ್ನು ಕೇಳಿರುವುದಾಗಿ ಮುಖ್ಯ ಮಂತ್ರಿ ಶ್ರೀ ದೇವರಾಜಅರಸ್‌ರವರು ಪತ್ರಿಕೆಯವರಿಗೆ ತಿಳಿಸಿದರು

● ನವದೆಹಲಿ — ಉನ್ನತ ಶಿಕ್ಷಣಕ್ಕೆ 15 ಅಂಶಗಳ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯ ಆಯೋಗ ಯೋಜಿಸಿದೆ.

ದೇವರಾಜ್ ಅರಸ್ ರಸ್ತೆ ಉದ್ಘಾಟನೆ

ಮೈಸೂರು — ರಾಜ್ಯಪಾಲರಾದ ಶ್ರೀ ಉಮಾಶಂಕರ ದೀಕ್ಷಿತ್‌ರವರು ಶುಕ್ರವಾರ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್‌ರವರ ರಸ್ತೆಯ ಪ್ರಾರಂಭವನ್ನು ಘೋಷಿಸಿ, ಅರಸ್ ಸರ್ಕಾರದ ಕಾರ್ಯಕ್ರಮಗಳನ್ನು ಪ್ರಶಂಸಿಸಿದರು

ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಶ್ರೀ ಬಿ ಎನ್ ಕೆಂಗೇಗೌಡರವರು ಮಾತನಾಡುತ್ತಾ, ದೇವರಾಜ ಅರಸ್ ರಸ್ತೆ ಮತ್ತು ಜಾನ್ಸಿ ಲಕ್ಷ್ಮೀಬಾಯಿ ರಸ್ತೆ ಸೇರುವ ಸ್ಥಳದಲ್ಲಿ ಮಾಜಿ ಮಹಾರಾಜರವರಾದ ಶ್ರೀ ಜಯ ಚಾಮರಾಜ ಒಡೆಯರ್‌ರವರ ಪ್ರತಿಮೆ ಸ್ಥಾಪಿಸಲು ಯೋಚಿಸಲಾಗುತ್ತಿದೆ ಎಂದು ತಿಳಿಸಿದರು.

★

ಪ್ಲಾಟಿನಂ ಜೂಬಿಲಿ

ಮೈಸೂರು — ಮೈಸೂರು ಕೋ ಆಪ್ ರೇಟಿವ್ ಬ್ಯಾಂಕ್ ಪ್ಲಾಟಿನಂ ಜೂಬಿಲಿ ಉದ್ಘಾಟಿಸುತ್ತಾ, ರಾಜ್ಯಪಾಲರಾದ ಶ್ರೀ ಉಮಾಶಂಕರ ದೀಕ್ಷಿತ್‌ರವರು, ಈ ಸಾಹಸವನ್ನು ಶ್ಲಾಘಿಸುತ್ತಾ, ದೇಶದಲ್ಲಿ ಸಹಕಾರ ಚಳವಳಿಯಿಂದ ಮಾತ್ರ ಸರ್ವೋದಯವಾದ ಸ್ಥಾಪನೆ ಆಗುವುದು ಎಂದರು ಅಧ್ಯಕ್ಷತೆ ವಹಿಸಿದ್ದ ಮುಖ್ಯ ಮಂತ್ರಿ ಶ್ರೀ ಡಿ ದೇವರಾಜ ಅರಸ್‌ರವರು, ಸಹಕಾರ ಚಳವಳಿಯಲ್ಲಿ ನಡೆಯುತ್ತಿರುವ ಕೆಡಕುಗಳ ವಿವರಗಳನ್ನು ಇತ್ತು. ವಿನಾಶಲಿ ಪದ್ಧತಿ ತಪ್ಪಿಸಲು ಈಗಿನ ಎರಡು ಪದ್ಧತಿಗಳು ಸಾಧಕವಾಗಿವೆ ಎಂದರು

★

ಮಂತ್ರಿಗಳ ಭರವಸೆ

ಮಡಿಕೇರಿ— ಕೈಗಾರಿಕೆ ಬೆಳವಣಿಗೆಗೆ ಇರುವ ನಿರ್ಬಂಧಗಳನ್ನೆಲ್ಲ ತೆಗೆದು ಹಾಕುವ ಭರವಸೆಯನ್ನು ಕೇಂದ್ರ ಕೈಗಾರಿಕಾ ಮಂತ್ರಿ ಶ್ರೀ ಟಿ ಎ ಪೈ ಇತ್ತರು.

ಕಾಂಗ್ರೆಸ್ ಪಕ್ಷಕ್ಕೆ 10 ಜನ

ಮೈಸೂರು — ಕಾಂಗ್ರೆಸ್ ಪಕ್ಷಕ್ಕೆ ಹತ್ತು ಮಂದಿ ವಿರೋಧ ಪಕ್ಷಗಳವರು ಸೇರಿದುದನ್ನು ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್‌ರವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು ಈ ಪಕ್ಷಕ್ಕೆ ವಿಧಾನ ಸಭೆಯಲ್ಲಿ ಹಂಗಾಮಿ ನಾಯಕರಾಗಿದ್ದ ಶ್ರೀ ಹೆಚ್ ಟಿ ಕೃಷ್ಣಪ್ಪನವರು ಒಬ್ಬರು. ಇದರಿಂದ 218 ಸದಸ್ಯರ ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿ 182 ಸದಸ್ಯರಾದರು.

★

ಪ್ರಾಣ ಪಾಯ ತಪ್ಪಿತು

ಬ್ಯೂನಾಸ್‌ಐರಸ್ — ಅರ್ಜಂಟೈನಾ ಅಧ್ಯಕ್ಷ ಜಾರ್ಜ್ ವಿಡೇಲೆಯವರು ಬಲಯುತವಾದ ಗುಂಡಿಗೆ ಆಹುತಿ ಆಗುತ್ತಿದ್ದುದು ತಪ್ಪಿತು ನೇದಿಕೆಯಿಂದ ಅವರು ಸ್ಫೋಟಕ್ಕೆ 2-3 ನಿಮಿಷಗಳ ಮೊದಲು ಹೊರಟುಹೋದರು ವ್ಯತ್ಯಾಸ ನಾಶವಾಯಿತು.

●

ವಿಜಯದಶಮಿ ಮೆರವಣಿಗೆ

ಮೈಸೂರು — ದಸರಾ ಮಹೋತ್ಸವ ಮುಕ್ತಾಯ ಸಮಾರಂಭದ ವಿಜಯದಶಮಿ ಮೆರವಣಿಗೆ ವೈಭವದಿಂದ ಬನ್ನಿ ಮಂಟಪಕ್ಕೆ ತೆರಳಿತು ಮೂರು ಲಕ್ಷಕ್ಕೆ ಹೆಚ್ಚು ಮಂದಿ ಮೆರವಣಿಗೆ ವೀಕ್ಷಿಸಿದರು. 55 ವರ್ಷದ ರಾಜೇಂದ್ರ ಅನೆಯ ಮೇಲಿನ ಚಿನ್ನದ ಅಂಬಾರಿಯಲ್ಲಿ ಶ್ರೀ ಚಾಮುಂಡೇಶ್ವರೀ ಅಮ್ಮನವರ ವಿಗ್ರಹ ಇಡಲಾಗಿತ್ತು. ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸ್‌ರವರು ನಂದಿ ಕಂಬದ ಪೂಜೆ ನಡೆಸಿದ್ದರು ಬನ್ನಿ ಮಂಟಪದಲ್ಲಿ ಪೋಲೀಸರು ವ್ಯವಸ್ಥೆ ಮಾಡಿದ್ದ ಟಾರ್ಚ್ ಲೈಟ್ ಪೆರೇಡ್‌ನಲ್ಲಿ ಮುಖ್ಯ ಮಂತ್ರಿಯವರ್ಕ್ ಸೆಲ್ಯೂಟ್ ಸ್ವೀಕರಿಸಿದರು.

(2)

ಅಧಿಕಾರಿಗಳ ಸಸ್ಪೆಂಡ್

ಹೈದರಾಬಾದು — ಓರ್ವ ವಿವಾಹಿತ ಮಹಿಳೆಯೊಡನೆ ಅನೀತಿ ಕಾರ್ಯ ನಡೆಸಿದ ಆಪಾದನೆಗಾಗಿ ಒಬ್ಬ ನ್ಯಾಯಾಂಗ ಅಧಿಕಾರಿ ಬಂಧಿತನಾಗಿ ಜೈಲಿನಲ್ಲಿ ಮೇಲೆ ಬಿದ್ದು ಗಡೆ ಅಧಮ ಈತನು ಸಸ್ಪೆಂಡಾದನು ಈ ಕಾರ್ಯದಲ್ಲಿ ಅಧಿಕಾರಿಗೆ ಸಹಾಯ ಮಾಡಿದ ಪೋಲೀಸು ಸರ್ಕಲ್ ಇನ್ಸ್‌ಪೆಕ್ಟರ್ ಸಸ್ಪೆಂಡಾದನು.

Rugs, Sweaters & Kashmir Coats

ರಗ್ಸು, ಸ್ವೆಟರು, ಕಾಶ್ಮೀರ್ ಕೋಟುಗಳಿಗೆ

ಬ್ಯಾಂಕ್ ರೋಡ್ ಬಾಹುಸಾರ್

A Fair Priec Shop in Actual Practice

ಭಾರತದಲ್ಲಿ ಗೋವಧೆ ಪೂರ್ಣ ನಿಶೇಧವಾಗಲಿ

ವುಡ್‌ಲಾಂಡ್ 1 10 76 ರಿಂದ

ಅಮೋಘ 2ನೇ ವಾರ

ರಂಗೀಲಾ ರತನ್

ಹಿಂದಿ ಕಲರ್

ರಿಷಿಕಪೂರ್ ಸರ್ವಿಬಾಬಿ ಅಶೋಕಕುಮಾರ್ ಅಜಿತ್ ಅಭಿನಯ

ದಿನ 3 ಪ್ರದರ್ಶನಗಳು

ಅಪೂರಾ 17 9 76 ರಿಂದ

ವಿಜಯವಾಣಿ

ಶ್ರೀನಾಥ್ ಕಲ್ಪನ ದ್ವಾರಕೀಶ್ ಲಿಜಿ.ಶಂಕರ್ ಅಭಿನಯ

ಕನ್ನಡ ಪ್ರತಿ ದಿನ 3 ಪ್ರದರ್ಶನಗಳು

Edited Printed and Published by Dharmapracharaniratа M S Krishna Rao (Proprietor) at the Satyavadi Press, Chamarajapuram, Mysore 4

ಗೋರಕ್ಷಣೆ'ಗೆ ಸಕಲ ನೆರವು ನೀಡಿ

ಗೋರಕ್ಷಣೆ, ಪ್ರಾಣಿದಯೆ, ಇತ್ಯಾದಿ ಪವಿತ್ರ ಧ್ಯೇಯಗಳ ಪ್ರಚಾರ ಪತ್ರಿಕೆಗಳು ರಾಷ್ಟ್ರದಲ್ಲಿ ಕೆಲವೇ ಇದ್ದು, ಧಾರ್ಮಿಕ ಪತ್ರಿಕೆಗಳು ಹೆಚ್ಚು ಕಾಲ ಬದುಕಿ ಬಾಳುವುದು ಅಸಾಧಾರಣವಾಗಿರುವಾಗ, "ಗೋರಕ್ಷಣೆ" ಯು ತನ್ನ ಬೆಳ್ಳಿ ಹಬ್ಬ ನೆರವೇರಿಸುವುದು ಹರ್ಷದಾಯಕವಾಗಿದೆ. ಧರ್ಮಾಭಿಮಾನಿಗಳೂ, ಗೋಮಾತೆ ಭಕ್ತರೂ, ಪ್ರಾಣಿದಯಾಪರರೂ ಜಾತಿ, ಮತ, ಭಾಷೆ ಬೇಧವಿಲ್ಲದೆ, 'ಗೋರಕ್ಷಣೆ" ದ ಅಭಿವೃದ್ಧಿ ಸಂದೇಶ ಮತ್ತು ಧನ ನೆರವನ್ನು ನೀಡಬೇಕೆಂದು ವಿನಂತಿಸುತ್ತೇವೆ

'ಗೋರಕ್ಷಣೆ' ಬೆಳ್ಳಿ ಹಬ್ಬ ಮತ್ತು ಅದರ ಅಭಿವೃದ್ಧಿಗೆ ಉದಾರ ನೆರವು ನೀಡಿರುವವರಿಗೆಲ್ಲಾ ಕೃತಜ್ಞತಾಪೂರ್ವಕ ವಂದನೆಗಳು

ಸಂಪಾದಕ, ಗೋರಕ್ಷಣ ಪತ್ರಿಕೆ, ಚಾಮರಾಜಪುರಂ, ಮೈಸೂರು 4

"ಸತ್ಯವಾದಿ" ವಜ್ರ ಮಹೋತ್ಸವ

ಭಗವಂತನ ಕೃಪೆಯಿಂದ "ಸತ್ಯವಾದಿ" ಯು 60 ನೇ ವರ್ಷ ಆರಂಭಿಸಿ ವಜ್ರ ಮಹೋತ್ಸವ ವರ್ಷವನ್ನು ಪ್ರವೇಶಿಸಿರುವುದೆಂಬುದನ್ನು ತಿಳಿಸಲು ಹರ್ಷಿಸುತ್ತೇವೆ.

ಸ್ವರ್ಣಮಹೋತ್ಸವ ಕಾಲದಲ್ಲಿ ದೊರೆತ ಶ್ರೀ ಜಗದ್ಗುರುಗಳವರ, ಶ್ರೀ ಭಾವಿಗಳವರ ಆಶೀರ್ವಾದ ಅನುಗ್ರಹವನ್ನು, ಉದಾರತೆಯಿಂದ ಕೂಡಿದ ಮಹನೀಯರ ನೆರವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಂಡು, ರಾಜ್ಯದ ಪ್ರಪ್ರಥಮ ವಜ್ರ ಮಹೋತ್ಸವದ ಯಶಸ್ವಿ ನೆರವೇರುವಿಕೆಗೆ ಪೂರ್ಣ ಸಹಾಯ ದೊರೆಯುವುದೆಂಬ ವಿಶ್ವಾಸ ಹೊಂದಿದ್ದೇವೆ

SHAKTI SUDHA

A Superb Tonic

Contribute Liberally to the National Defence Fund

Protect the Cow